**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 685/2014**

**ಪಿ.ಡಬ್ಲ್ಯೂ: 14**

**ಸಿ.ಡಬ್ಲ್ಯೂ: 18**

**ಹೆಸರು** : ಪ್ರಿಯಾಂಕ ಮೇರಿ ಫ್ರಾನ್ಸಿಸ್

ಗಂಡನ **ಹೆಸರು** : ವಿನೀತ್ ಪುನುತ್

**ವಯಸ್ಸು** : 38 **ವರ್ಷ**

**ಉದ್ಯೋಗ** : ಐ ಎ ಎಸ್ ಅಧಿಕಾರಿ

**ವಾಸಸ್ಥಳ** : ಬೆಂಗಳೂರು

**ದಿನಾಂಕ: 19-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

**ನಾನು ದಿ: 04-07-2014 ರಿಂದ 20-04-2015 ರವರೆಗೆ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನೆ.**

ದಿನಾಂಕ: *10-06-2014* ರಂದು ಚಾಸಾ-*22* ರವರು ಮನವಿಯನ್ನು ನಮ್ಮ ಇಲಾಖೆಗೆ ಸಲ್ಲಿಸಿದ್ದು, ತಹಶೀಲ್ದಾರ್ ತರೀಕೆರೆಯವರು *14-03-2014* ರಂದು ಒಂದು ದೂರನ್ನು ಸಲ್ಲಿಸಿದ್ದು, ಬಾವಿಕೆರೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ *2* ನೇ ಆರೋಪಿಯಾದ ರಾಮಯ್ಯನವರು ಬಾವಿಕೆರೆ ಗ್ರಾಮ ಪಂಚಾಯಿತಿಯ ಅರಸೀಕೆರೆ ಗ್ರಾಮದ ಸರ್ವೆ ನಂ.*7*/ಪಿ*2* ರಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟ ಜಮೀನನ್ನು *1* ನೇ ಆರೋಪಿ ವೆಂಕಟೇಶ್ ಹಾಗೂ ಸೀತರಾಮ್ ಮತ್ತು ಸಂದೇಶ್ ಶೆಟ್ಟಿರವರ ಹೆಸರಿಗೆ ಅನಧೀಕೃತವಾಗಿ ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ ಅವರ ಹೆಸರುಗಳನ್ನು ನಮೂದು ಮಾಡಿದ್ದು, ಇದರ ಬಗ್ಗೆ ಪ್ರಥಮ ವರ್ತಮಾನ ವರದಿ ದಾಖಲು ಮಾಡಿದ್ದು, ಸದರ ದಾಖಲೆಗಳ ಆಧಾರದ ಮೇಲೆ ನಾನು ದಿ: *30-07-2014* ರಂದು *2* ನೇ ಆರೋಪಿ ಮೇಲೆ ನ್ಯಾಯಾಲಯಕ್ಕೆ ದೋಷರೋಪಣಾ ಪತ್ರ ಸಲ್ಲಿಸಲು ಅನುಮತಿ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅನುಮತಿ ಪತ್ರವಾಗಿದ್ದು, ಸದರಿ ದಾಖಲೆಯನ್ನು ನಿಪಿ-*7* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*7*(ಎ) ಎಂದು ಗುರುತಿಸಲಾಯಿತು.

***ಪಾಟೀ ಸವಾಲು ಃ 1ನೇ ಆರೋಪಿತರ ಪರ ವಕೀಲರಿಂದ.***

*1*ನೇ ಆರೋಪಿ ಪರ ಪಾಟೀ ಸವಾಲು ಇಲ್ಲ

***ಪಾಟೀ ಸವಾಲು ಃ 2 ನೇ ಆರೋಪಿತರ ಪರ ವಕೀಲರಿಂದ.***

*2*ನೇ ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ನಮ್ಮ ಅಧಿಕಾರಿಗಳ ಒತ್ತಡದ ಮೇರೆಗೆ *2*ನೇ ಆರೋಪಿಯ ವಿರುದ್ದ ದೋಷರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಅನುಮತಿ ನೀಡಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***